**ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ. ಸಿ. ನಂ. 34/2024**

ಸಿಡಬ್ಲ್ಯೂ-16/ಪಿಡಬ್ಲ್ಯೂ-10

| | |
|---|---|
| ಸಾಕ್ಷಿದಾರರ ಹೆಸರು | ಸಂಗೀತಾ ಪುರಾಣಿಕ್ |
| ಗಂಡನ ಹೆಸರು | ಮಂಜುನಾಥ ದೇಶಪಾಂಡೆ |
| ವಯಸ್ಸು | 35 ವರ್ಷ |
| ಉದ್ಯೋಗ | ಡೆಪ್ಯೂಟಿ ಇಲೆಕ್ಟ್ರಿಕಲ್ ಇನ್ಸಪೆಕ್ಟರ್, ಹಾವೇರಿ |
| ವಾಸ ಸ್ಥಳ | ಹುಬ್ಬಳ್ಳಿ |

**ದಿನಾಂಕ : 04-07-2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ನಾನು ಜನವರಿ 2020 ರಿಂದ ಹಾವೇರಿಯಲ್ಲಿ ಡೆಪ್ಯೂಟಿ ಇಲೆಕ್ಟ್ರಿಕಲ್ ಇನ್ಸಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 12-10-2022 ರಂದು ಹೆಸ್ಕಾಂ ಹಾನಗಲ್ಲ ನಿಂದ ದಿಃ 11-10-2022 ರಂದು ಅರಳೇಶ್ವರ ಗ್ರಾಮದ ಗೋವಿಂದಪ್ಪ ಚಿಕ್ಕೇರಿ ಎಂಬುವವರ ಹೊಲದ ಹತ್ತಿರ ಅಪಘಾತ ಆಗಿರುವ ಬಗ್ಗೆ ಮಾಹಿತಿ ಬಂದಿದ್ದು, ಅದರಂತೆ ತನಿಖೆ ನಡೆಸಬೇಕೆಂದು ತಿಳಿಸಿರುತ್ತಾರೆ. ಅದರಂತೆ ಅದೇ ದಿನ ಸದರಿ ಸ್ಥಳಕ್ಕೆ ಹೋಗಿರುತ್ತೇನೆ. ನಾನು ಸದರಿ ಸ್ಥಳಕ್ಕೆ ಹೋದಾಗ ಮೃತದೇಹ ಅಲ್ಲಿ ಇರಲಿಲ್ಲ, ಹಾನಗಲ್ಲ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುವ ಬಗ್ಗೆ ನನಗೆ ತಿಳಿಸಿರುತ್ತಾರೆ. ನಾನು ಅಲ್ಲಿ ತನಿಖೆಯನ್ನು ಮಾಡಿದಾಗ ಗೋವಿಂದಪ್ಪ ಚಿಕ್ಕೇರಿ

ಅವರ ಹೊಲದಲ್ಲಿ 100 ಕೆ ವಿಯ ಪರಿವರ್ತಕದಿಂದ ಹೊರಟಿರುವ ಮೊದಲ ಸ್ಥಾನದ ಎಲ್ ಟಿ ವಾಹಕ ಅದರ ವೈ ಫೇಸ್ ವಾಹಕ ತುಂಡಾಗಿ ನೆಲದ ಮೇಲೆ ಬಿದ್ದಿರುತ್ತದೆ. ಅದನ್ನು ಎಲ್ಲಿ ಜೋಡಿಸಿರುತ್ತಾರೆ ಅಲ್ಲಿ ಬಿದ್ದಿರುವುದು ಕಂಡು ಬಂದಿರುತ್ತದೆ. ಸದರಿ ವಾಹಕದ ಮೇಲೆ ಸುಟ್ಟಿರುವ ಕಲೆ ಇದ್ದು, ಅದನ್ನೇ ಅವರು ಸ್ಪರ್ಶಿಸಿ ಅಥವಾ ತಾಗಿ ಮೃತಪಟ್ಟಿರುತ್ತಾರೆ ಎಂದು ಕಂಡು ಬಂದಿರುತ್ತದೆ. ನನ್ನ ಅಭಿಪ್ರಾಯದಲ್ಲಿ ಸದರಿ ಅಪಘಾತವು ಹೆಸ್ಕಾಂ ಅಧಿಕಾರಿಯವರ ನಿರ್ಲಕ್ಷತನದಿಂದ ಆಗಿರುತ್ತದೆ. ತುಂಬಾ ಹಳೇಯದಾದ ಕಂಡಕ್ಟರನ್ನು ಅವರು ರಿಪ್ಲೇಸ್ ಮಾಡಬೇಕಾಗಿತ್ತು ಮತ್ತು ತುಂಬಾ ಕಡೆ ಜೋಡಣೆ ಆಗಿದ್ದರಿಂದ ಅವುಗಳು ಅಲ್ಲಿಯೇ ತುಂಡಾಗಿ ಬಿದ್ದಿರುತ್ತವೆ. ಪರಿವರ್ತಕದ ನಿರ್ವಹಣೆಯನ್ನು ಮಾಡಬೇಕಾಗಿತ್ತು.

(ಮುಂದುವರೆದ ಮುಖ್ಯ ವಿಚಾರಣೆಗೆ ಮಾನ್ಯ ಸ.ಸ.ಅ ರವರು ಸಮಯಾವಕಾಶ ಕೋರಿದ್ದು, ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-
ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ